ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1170 (1401)
ಸದಸ್ಯರ ಹೆಸರು	:	ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	16-03-2021
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಮೈಸೂರು ರಂಗಾಚಾರುಲು ಪುರಭವನದ ಆವರಣದಲ್ಲಿ ನೆಲಮಹಡಿ ವಾಹನ ನಿಲುಗಡೆ ನಿರ್ಮಾಣ ಕಾಮಗಾರಿ ಕಳೆದ ಹತ್ತು ವರ್ಷಗಳಿಂದ ನೆನೆಗುದಿಗೆ ಬೀಳಲು ಕಾರಣಗಳೇನು; ಈ ಯೋಜನೆಯ ರೂಪುರೇಷೆಗಳೇನು; ನಿರ್ಮಾಣ ಕಾಮಗಾರಿಯ ಅಂದಾಜು ವೆಚ್ಚ ಎಷ್ಟು;	ಮೈಸೂರು ನಗರದ ಪುರಭವನದ ಆವರಣದಲ್ಲಿ ಬೇಸ್‌ಮೆಂಟ್ ಪಾರ್ಕಿಂಗ್ ನಿರ್ಮಾಣ ಕಾಮಗಾರಿಯನ್ನು ಜೆ.ಎನ್. ನರ್ಮ್ ಅನುದಾನದಡಿ ರೂ. 17.66 ಕೋಟಿಗಳಿಗೆ ಟೆಂಡರ್ ಕರೆದು ಮೆ|| ಛಾಬ್ರಿಯ ಅಸೋಸಿಯಟ್ಸ್, ಹೈದರಾಬಾದ್ ರವರಿಗೆ ವಹಿಸಲಾಗಿರುತ್ತದೆ. ಆದರೆ ಗುತ್ತಿಗೆದಾರರು ನಿಗಧಿತ ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿರುವುದಿಲ್ಲ ಹಾಗೂ ನಗರ ಪಾಲಿಕೆಯ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಕಾಮಗಾರಿ ಕುರಿತು ಆರ್ಬಿಟ್ರೇಷನ್ ದಾವೆ ಹೂಡಿರುತ್ತಾರೆ ಹಾಗೂ ಆರ್ಬಿಟ್ರೇಷನ್ ದಾವೆ ಮುಗಿಯುವವರೆಗೂ ಕಾಮಗಾರಿಯನ್ನು ಮರು ಟೆಂಡರ್ ಕರೆದು ನಿರ್ವಹಿಸದಂತೆ ತಡೆಯಾಜ್ಞೆ ಪಡೆದಿರುತ್ತಾರೆ. ಈ ಕಾಮಗಾರಿಯಲ್ಲಿ ಎರಡು ಬೇಸ್‌ಮೆಂಟ್ ಪಾರ್ಕಿಂಗ್, ಆಂಪಿ ಥಿಯೇಟರ್, ಪೊಲಿಟಿಕಲ್ ಸ್ಟೇಜ್ ಮತ್ತು ಶೌಚಾಲಯ ನಿರ್ಮಾಣವು ಒಳಗೊಂಡಿದ್ದು, ಇದಕ್ಕೆ ಅಂದಾಜು ಪಟ್ಟಿಯನ್ನು ರೂ.17.66 ಕೋಟಿಗಳಿಗೆ ಸಿದ್ಧಪಡಿಸಲಾಗಿರುತ್ತದೆ. ಉಳಿಕೆ ಕಾಮಗಾರಿಯನ್ನು ಪ್ರಾರಂಭಿಸುವ ಬಗ್ಗೆ ಕಾನೂನು ಸಲಹೆ ಮತ್ತು ತಾಂತ್ರಿಕ ಸಲಹಾ ಸಮಿತಿಯ ತೀರ್ಮಾನದಂತೆ ಹೊಸದಾಗಿ ಅಂದಾಜು ಪಟ್ಟಿ ಸಿದ್ಧಪಡಿಸಿ, ದಿನಾಂಕ 22-02-2021ರಂದು ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.
ಆ)	ಈ ಕಾಮಗಾರಿಯನ್ನು ಪುನರ್ ಪರಿಶೀಲಿಸಿ, ಹೊಸದಾಗಿ ಅಂದಾಜು ಸಿದ್ಧಪಡಿಸಿ, ಪುನಃ ಟೆಂಡರ್ ಕರೆಯಲು ಕ್ರಮ ತೆಗೆದುಕೊಳ್ಳಲಾಗಿದೆಯೇ; ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಯಾವಾಗ;	
ಇ)	ಪುರಭವನದ ಹೊರ ಆವರಣವನ್ನು ಸುಂದರವಾಗಿ ಅಭಿವೃದ್ಧಿಪಡಿಸಲು ಕ್ರಮ ಜರುಗಿಸಲಾಗುವುದೇ?	ಪುರಭವನದ ಹೊರ ಆವರಣದಲ್ಲಿ ಪಾರ್ಕ್ ಅಭಿವೃದ್ಧಿಪಡಿಸುವ ರೂ. 10.00 ಲಕ್ಷಗಳ ಒಂದು ಕಾಮಗಾರಿಯನ್ನು 2020-21ನೇ ಸಾಲಿನ 15ನೇ ಹಣಕಾಸು ಅನುದಾನದಲ್ಲಿ ಕೈಗೊಳ್ಳಲಾಗಿರುತ್ತದೆ. ಸದರಿ ಕಾಮಗಾರಿಯು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.

ಕಡತ ಸಂಖ್ಯೆ:ನಅಇ 155 ಎಸ್.ಎಫ್.ಸಿ 2021

(ಬಿ.ಎ ಬಸವರಾಜ)
ನಗರಾಭಿವೃದ್ಧಿ ಸಚಿವರು